ಕೊಂಡು ಬರುವವರೆಲ್ಲಾ ಈಗ ಅದನ್ನು ದೂರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ದೇವರೇ ಅದನ್ನು 'Tourists' Paradise' ಆಗಿ ಮಾಡಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ದೇವರು ಮಾಡಿದ್ದರೂ, ಸರ್ಕಾರದವರು ಮಾಡಬೇಕಾದ್ದನ್ನು ಮಾಡದೆ ಇರುವುದರಿಂದ ಅದನ್ನೀಗ ಎಲ್ಲರೂ ದೂರುತ್ತಿರುವುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲೂ ಕೆಲವು ರಸ್ತೆಗಳು ಸರಿಯಾಗಿಲ್ಲ. ಅವನ್ನು ಸರಿಮಾಡುವುದಕ್ಕೆ ನೂಕ್ಕ ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ.

Dam across Yagachi River near Ranaghatta

Q.—20. Sri B. N. BORANNA GOWDA (Belur).—

Will the Government be pleased to state:—

(*a*) whether it is a fact that an estimate has been prepared for the construction of a small dam across Yagachi river near Ranaghatta in Belur taluk ;

(*b*) the estimated cost of the same and the acres of land that would come under cultivation ?

A.—Sri Kadidal MANJAPPA (Minister for Revenue and Public Works).—

(*a*) Yes, for the renovation of the existing old anicut.

(*b*) Rs. 38 lakhs ; no fresh irrigation is contemplated and it is proposed only to feed Halebid tank.

Sri B. N. BORANNA GOWDA.—Are you aware that these two proposals are made to feed the Halebid tank ?

Sri Kadidal MANJAPPA.—Yes.

Sri B. N. BORANNA GOWDA.—Weat about the other proposal made to feed the tank ?

Sri Kadidal MANJAPPA.—The alternative suggested by the Hon'ble Member is to construct a reservoir near Bylahalli. Investigation is being made.

Sri B. N. BORANNA GOWDA.—Are you aware that by constructing that reservoir, it would benefit something like 800 acres of dry and 1,600 acres of wet lands ?

Sri Kadidal MANJAPPA.—I am not aware of it, Sir.

Mysore (Personal and Miscellaneous) Inams Abolition Act (Implementation).

Q.—22. Sri S. KARIYAPPA (Kanakapura).—

Will the Government be pleased to state :—

(*a*) the action taken by them to implement the provisions of the Personal and Miscellaneous Inams Abolition Act to secure its benefits to tenants ;

(*b*) if no action has been taken, when they intend to do so ?

A.—Sri Kadidal MANJAPPA (Minister for Revenue and Public Works).—

(*a*) The provisions of the Personal and Miscellaneous Inams Abolition Act will be implemented as soon as the rules under the Act, which are being framed, are finalised.

(*b*) this question does not arise in view of answer to (*a*)

ಶ್ರೀ ಎಸ್. ಕರಿಯಪ್ಪ.—ಇನಾಂ ರದ್ದಿಯಾತಿ ಕಾನೂನಿಗೆ ಸಂಬಂಧಪಟ್ಟ ನಿಯಮಾವಳಿಗಳನ್ನು ರಚನೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಯಾವ stage ನಲ್ಲಿದೆಯೆಂದು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಿಯಮಾವಳಿಗಳನ್ನು ಸಂಬಂಧಪಟ್ಟ Special Officerರವರು ಮಾಡಿದ್ದಾರೆ. ಅದನ್ನು ಲಾ ಇಲಾಖೆಯಲ್ಲಿ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಸ್. ಕರಿಯಪ್ಪ.—ಎಷ್ಟು ದಿವಸಕ್ಕೆ ಪೂರ್ಣವಾಗಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಮಾಡುತ್ತಿದ್ದೇವೆ. ಇನ್ನೊಂದು ತಿಂಗಳಿನಲ್ಲಿ ಮುಗಿಯಬಹುದು.

ಶ್ರೀ ಎಸ್. ಕರಿಯಪ್ಪ.—ಅದಾದಮೇಲೆ ದೇಶಾದ್ಯಂತ ಇರುವ ಎಲ್ಲ ಹಳ್ಳಿಗಳಿಗೂ ಒಟ್ಟಿಗೆ ಅನ್ವಯಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ ; ಕೆಲವು ಹಳ್ಳಿಗಳು ಸರ್ವೆ ಆಗಿವೆ ; ಕೆಲವು ಆಗಿಲ್ಲ. ಅವನ್ನು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಈಗ ಇನಾಂ ಬಿಲ್ ಆದ ಮೇಲೆ ರೈತರಿಗೂ ಇನಾಂದಾರರಿಗೂ ತೊಂದರೆ ಹೆಚ್ಚಿಗೆ ಉಂಟಾಗಿ ಬಿಕ್ಕಟ್ಟಿಗೆ ಒಳಗಾಗಿರುವ ಪ್ರದೇಶಕ್ಕೆ ಇದನ್ನು ಮೊದಲು ಅನ್ವಯಿಸುವುದನ್ನು ಯೋಚನೆಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆರೀತಿ ಯಾವುದಾದರೂ ಒಂದು ನೀತಿಯನ್ನನುಸರಿಸಿಯೇ ಮಾಡುತ್ತೇವೆ.

ಶ್ರೀ ಟಿ. ಸಿ. ಬಸಪ್ಪ.—ತಾವು ಈ ಇನಾಂ ರದ್ದಿಯಾತಿ ಮನೂದೆಯ ರೂಲ್ಸುಗಳನ್ನು ಮಾಡುವುದು ನಿಧಾನವಾಗಿರುವುದರಿಂದ ರೈತರ ವಶದಲ್ಲಿರುವ ಕಾಡುಗಳನ್ನೆಲ್ಲಾ ಇನಾಂದಾರರು ಕಡಿದುಹಾಕಿ ರೈತರಿಗೆ